೯೦೦. ಮಾನ್ಯ ಸದಸ್ಯರಾದ ಶ್ರೀ ಎಚ್. ಎ. ಎಚ್. ಎಂ, ಗೌನ್ರವರು ಸದನದಲ್ಲಿ ಹಾಜರಿರಲಿಲ್ಲ.

ಕೆ.ಜಿ.ಎಫ್.ನಲ್ಲಿ ಪಶುವೈದ್ಯ ಆಸ್ಪತ್ರೆಗಳನ್ನು ತೆರೆಯುವುದು.

೭೪೮. ಶ್ರೀ ಟಿ.ಎಸ್. ಮಣಿ (ಕೆ.ಜಿ.ಎಫ್.).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಪಶು ಸಂಗೋಪನೆ ಹಾಗೂ ಪಶುವೈದ್ಯ ಸೇವೆಗಳ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಕೆ.ಜಿ.ಎಫ್.ದಲ್ಲಿರುವ ಪಶು ವೈದ್ಯ ಸಂಸ್ಥೆಗಳ ಸಂಖ್ಯೆಷ್ಟು ಮತ್ತು ದನಗಳ ಆರೋಗ್ಯವನ್ನು ಈ ಪಶು ವೈದ್ಯ ಸಂಸ್ಥೆಗಳು ನೋಡಿಕೊಳ್ಳುತ್ತಿವೆ ?

ಆ) ಸರ್ಕಾರವು ಮತ್ತೊಂದು ಪಶು ವೈದ್ಯ ಶಾಲೆಯನ್ನು ಕೆ. ಜಿ. ಎಫ್. ನಲ್ಲಿ ಸ್ಥಾಪಿಸಲು ಉದ್ದೇಶಿಸಿದೆಯೆ ?

ಶ್ರೀ ಸಿದ್ಧರಾಮಯ್ಯ (ಪಶು ಸಂಗೋಪನೆಯ ರಾಜ್ಯ ಸಚಿವರು).—

ಅ) ಕೆ.ಜಿ.ಎಫ್.ನಲ್ಲಿ ಒಂದು ಪಶುವೈದ್ಯಶಾಲೆ ಇದ್ದು, ಅದು ೧೮,೭೦೦ ದನಗಳ ಆರೋಗ್ಯವನ್ನು ನೋಡಿಕೊಳ್ಳಲಾಗುತ್ತಿದೆ.

ಆ) ಇಲ್ಲ.

ಶ್ರೀ ಟಿ.ಎಸ್, ಮಣಿ.—ನಮ್ಮಲ್ಲಿ ಆಸ್ಪತ್ರೆಯ ಅವಶ್ಯಕತೆ ಇದೆ ಆದುದರಿಂದ ಅಲ್ಲಿ ಹಾಸ್ಪೆಟಲ್‌ನ್ನು ಮಾಡಬೇಕು.

ಶ್ರೀ ಸಿದ್ಧರಾಮಯ್ಯ.—ಇನ್ನೂ ಒಂದು ಪಶು ವೈದ್ಯ ಶಾಲೆಯನ್ನು ನಿರ್ಮಿಸುವ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ. ಅಲ್ಲಿರತಕ್ಕಂತಹ ಜಾನುವಾರುಗಳ ಸಂಖ್ಯೆಗೆ ಇನ್ನೂ ಒಂದು ಪಶುವೈದ್ಯ ಶಾಲೆಯಂನ್ನು ನಿರ್ಮಿಸುವ ಪರಿಸ್ಥಿತಿ ಇಲ್ಲ.

ಶ್ರೀ ಟಿ.ಎಸ್. ಮಣಿ.—ಇವಾಗ ಅಲ್ಲಿ ಹೆಚ್ಚಾಗಿ ಕೇಸ್‌ಸ್‌ಗಳು ಬರುತ್ತಿವೆ. ಅದಕ್ಕೆ ಇನ್ನೊಂದು ಹಾಸ್ಪಿಟಲ್ ಬೇಕಾಗಿದೆ. ೫೦ ಮೈಲುಗಳಿಂದ ಜಾನುವಾರುಗಳನ್ನು ಕರೆದುಕೊಂಡು ಬರಬೇಕಾಗಿದೆ, ಆದುದರಿಂದ ಇನ್ನೊಂದು ಹಾಸ್ಪಿಟಲ್‌ನ್ನು ಮಾಡಿಕೊಡುತ್ತೀರಾ ?

ಶ್ರೀ ಸಿದ್ಧರಾಮಯ್ಯ.—ಮಾನ್ಯ ಅಧ್ಯಕ್ಷರೇ, ಕೆ. ಜಿ. ಎಫ್. ನಲ್ಲಿ ರಾಸುಗಳ ಸಂಖ್ಯೆಗೆ ಅನುಗುಣವಾಗಿ ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಇನ್ನು ಮೂರು ಪಶು ವೈದ್ಯ ಶಾಲೆಯನ್ನು ಕಟ್ಟಬೇಕೆಂದು ಇದೆ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಹೊಸ ಹಾಸ್ಪಿಟಲ್‌ನ್ನು ಕೊಡುವ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ. ಇನ್ನು ಮುಂದೆ ಆದರ ಬಗ್ಗೆ ಯೋಚನೆ ಮಾಡೋಣ.

ಶಹಾಬಾದ್‌ನಲ್ಲಿರುವ ಶಾಲೆಯ ಕಟ್ಟಡಗಳು.

೭೪೯. ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

೧) ಶಹಾಬಾದ ಕ್ಷೇತ್ರದ ಎಷ್ಟು ವಿವಿದ್ದೋದ್ದೇಶ ಶಾಲೆ ಹಾಗೂ ಪ್ರೌಢ ಶಾಲೆಗಳು ತಮ್ಮದೇ ಆದ ಕಟ್ಟಡಗಳನ್ನು ಹೊಂದಿವೆ?

೨) ಶಹಾಬಾದ್‌ನಲ್ಲಿ ಹೆಣ್ಣು ಮಕ್ಕಳ ಮತ್ತು ಸರ್ಕಾರಿ ಪ್ರೌಢಶಾಲೆಯು ಕಟ್ಟಡ ಅತಿ ದುಃಸ್ಥಿತಿಯಲ್ಲಿರುವುದರಿ ಸರ್ಕಾರದ ಗಮನಕ್ಕೆ ಬಂದಿದೆಯೇ ?

೩) ಹಾಗಿದ್ದಲ್ಲಿ ಸದರಿ ಶಾಲಾ ಕಟ್ಟಡಗಳ ದುರಸ್ತಿಗಾಗಿ ಈ ವರ್ಷದಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ. ಹಾಗೂ ದುರಸ್ತಿ ಕಾಮಗಾರಿಯು ಯಾವಾಗ ಪೂರ್ಣಕೆ ಆಗುವುದು ?

ಶ್ರೀ ಎಂ. ರಘುಪತಿ(ಶಿಕ್ಷಣ ಮಂತ್ರಿಗಳು). –

೧) ಈ ಕ್ಷೇತ್ರದಲ್ಲಿ ೪ ಪ್ರೌಢಶಾಲೆಗಳಿಗೆ ಸ್ವಂತ ಕಟ್ಟಡ ಇದೆ.

೨) ಬಂದಿದೆ.

೩) ೮೫-೮೬ರಲ್ಲಿ ಶಾಲಾ ಕಟ್ಟಡಗಳ ದುರಸ್ತಿಗಾಗಿ ಹಣ ಒದಗಿಸಿರುವುದಿಲ್ಲ. ಹಣ ದೊರಕಿದ ನಂತರ ಹಂತ ಹಂತವಾಗಿ ಅವಶ್ಯಕವಾಗಿ ದುರಸ್ತಿಯಾಗಬೇಕಾಗಿರುವ ಶಾಲೆಗಳ ಜೊತೆ ಶಹಾಬಾದ್ ಸರ್ಕಾರಿ ಪ್ರೌಢಶಾಲೆಯ ದುರಸ್ತಿಯನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಈ ಪ್ರಶ್ನೆ ಕೇಳಿದ್ದು ಏಕೆಂದರೆ, ನಮ್ಮ ತಾಲ್ಲೂಕಿನಲ್ಲಿ ಶಾಲೆಗಳಿಗೆ ಕಟ್ಟಡಗಳು ಇಲ್ಲದೆ ಬಹಳ ತೊಂದರೆಯಾಗಿದೆ. ನಮ್ಮ ಭಾಗದಲ್ಲಿ ಮಳೆ ಬಂದರೆ ಬಹಳಷ್ಟು ಶಾಲಾ ಕಟ್ಟಡಗಳು ಬಿದ್ದು ಹೋಗುತ್ತವೆ. ಶಹಬಾದ್‌ನಲ್ಲಿರುವ ಹೈಸ್ಕೂಲು ಮತ್ತು ಇತರೇ ಸ್ಕೂಲಿಂಗಳ ಕಟ್ಟಡಗಳೆಲ್ಲಾ ಹಳೆಯದಾಗಿವೆ. ನಮ್ಮ ದುರ್ದೈವ ಎಂದು ಕಾಣಿಸುತ್ತದೆ, ಎನ್. ಆರ್. ಇ. ಪಿ. ಯಲ್ಲೂ ಯಾವ ಕೆಲಸಗಳನ್ನು ತೆಗೆದುಕೊಳ್ಳಲಿಲ್ಲ. ಶಾಲಾ ಕಟ್ಟಡಗಳನ್ನು ರಿಪೇರಿ ಮಾಡಲಿಲ್ಲವೆಂದರೆ ಹೇಗೆ ? ಬರುವ ಮಳೆಗಾಲದಲ್ಲಿ ಎಲ್ಲಾ ಶಾಲಾ ಕಟ್ಟಡಗಳು ಬಿದ್ದು ಹೋಗುತ್ತವೆ. ಆದಂದರಿಂದ ದಯಮಾಡಿ ತಾವು ನಮ್ಮ ತಾಲ್ಲೂಕಿಗೆ ವಿಸಿಟ್ ಮಾಡಿ, ಶಾಲಾ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ. —ಮಾನ್ಯ ಸದಸ್ಯರು ಕಳವಳವನ್ನು ವ್ಯಕ್ತ ಪಡಿಸಿದ್ದಾರೆ. ಅದನ್ನು ಸಂಪೂರ್ಣವಾಗಿ ನಾನು ಒಪ್ಪಿಕೊಳ್ಳುತ್ತೇನೆ ಹಲವಾರು ಶಾಲಾ ಕಟ್ಟಡಗಳು ಬಹಳ ದುಸ್ತಿಯಲ್ಲಿವೆ. ಶಾಲಾ ಕಟ್ಟಡಗಳನ್ನು ಸರಿ ಮಾಡಬೇಕೆಂದು ೨ ಕೋಟಿ ರೂಪಾಯಿಗಳನ್ನಾದರೂ ಖರ್ಚು ಮಾಡಬೇಕೆಂದು ನಾವು ಯೋಜನೆ ಹಾಕಿಕೊಂಡಿದ್ದೇವೆ. ಅದನ್ನು ಹಣಕಾಸಿನ ಇಲಾಖೆಗೆ ಕಳುಹಿಸಿದ್ದೇವೆ. ಅಲ್ಲಿಂದ ಸ್ಯಾಂಕ್ಷನ್ ಆಗಿ ಬಂದ ತಕ್ಷಣ ಶಾಲಾ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ವಿಪ್ಪಾಡು ಮಾಡುತ್ತೇನೆ. ಅವರು ಒಂದು ಸಲ ಅವರ ತಾಲ್ಲೂಕಿಗೆ ವಿಸಿಟ್ ಮಾಡಬೇಕೆಂದು ಹೇಳಿದ್ದಾರೆ. ಅಧಿವೇಶನ ಮುಗಿದ ತಕ್ಷಣ ಅಲ್ಲಿಗೆ ಹೋಗಿ ಬರುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,—ಇದು ಶಹಬಾದ್‌ಗೆ ಮಾತ್ರ ಸೀಮಿತವಾದ ಪ್ರಶ್ನೆಯಾದರು ಕೂಡ, ತಮಗೆ ಗೊತ್ತಿದ್ದ ಹಾಗೆ ಎರಡು ಸಾವಿರ ಹೈಸ್ಕೂಲುಗಳು ಇವೆ. ಹೊಸದಾಗಿ ನಾಲ್ಕು ನೂರು, ಐದು ನೂರು ಸ್ಕೂಲುಗಳನ್ನು ಕೊಡುತ್ತಿದ್ದೀರಿ ಆದರೆ ಎಂದೆ ಇದ್ದಂತಹ ಎರಡು ಸಾವಿರ ಹೈಸ್ಕೂಲುಗಳು ವಿತ್‌ಔಟ್ ಬಿಲ್ಡಿಂಗ್ಸ್ ಇವೆ. ಆದುದರಿಂದ ಅದಕ್ಕೆ ಒಂದು ಮಾಸ್ಟರ್ ಪ್ಲಾನ್ ಮಾಡಿ ಹಂತಹಂತವಾಗಿ ಒಂದು ೫-೬ ವರ್ಷಗಳಲ್ಲಿ ಸಂಪೂರ್ಣವಾಗಿ ಎಲ್ಲಾ ಹೈಸ್ಕೂಲುಗಳಿಗೆ ಬಿಲ್ಡಿಂಗ್‌ನ್ನು ಮಾಡತಕ್ಕ ವ್ಯವಸ್ಥೆ ಮಾಡುತ್ತೀರಾ ಹೇಗೆ ?

ಶ್ರೀ ಎಂ. ರಘುಪತಿ.—ಮಾಸ್ಟರ್ ಪ್ಲಾನ್ ಪ್ರಿಪೇರ್ ಮಾಡಿದ್ದೇವೆ. ಈ ಪ್ಲಾನ್‌ಗೆ ೬ ಕೋಟಿ ರೂಪಾಯಿಗಳು ಬೇಕಾಗುತ್ತವೆ. ಇದರಲ್ಲಿ ಜೂನಿಯರ್ ಕಾಲೇಜುಗಳು ಮತ್ತು ಹೈಸ್ಕೂಲುಗಳೂ ಸೇರುತ್ತವೆ. ಇನ್ನು ೫ ವರ್ಷಗಳಲ್ಲಿ ಅವುಗಳನ್ನು ಪೂರೈಸಬೇಕೆನ್ನುವುದೇ ನಮ್ಮ ಉದ್ದೇಶ. ಅದನ್ನು ಅದ್ಯತೆ ಮೇರೆಗೆ ಪೂರೈಸುತ್ತೇವೆಂದು ಈ ಸದನದಲ್ಲಿ ಹೇಳುತ್ತಿದ್ದೇನೆ.

ಶಿಕಾರಿಪುರದಲ್ಲಿ ಕಿರಿಯ ಕಾಲೇಜು ಕಟ್ಟಡದ ನಿರ್ಮಾಣ.

೬೨೨. ಶ್ರೀ ಬಿ. ಎಸ್. ಯಡಿಯೂರಪ್ಪ(ಶಿಕಾರಿಪುರ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಶಿಕಾರಿಪುರ ಜೂನಿಯರ್ ಕಾಲೇಜಿನಲ್ಲಿ ಈ ಹಿಂದೆ ಕಟ್ಟಿದ್ದ ಶೆಡ್‌ಗಳು ಬಿದ್ದು ಹೋಗಿರುವುದರಿಂದ ಸ್ಥಳಾವಕಾಶವಿಲ್ಲದಿರುವುದು ನಿಜವೇ ?

ಆ) ಸದರಿ ಕಾಲೇಜಿಗೆ ಸಚಿವರು ಬೇಟಿಕೊಟ್ಟ ಕಾಲಕ್ಕೆ ನೀಡಿದ ಆಶ್ವಾಸನೆಯಂತೆ ಕಟ್ಟಡ ಕಟ್ಟಲು ಏನಾದರೂ ಆದೇಶ ಕೊಡಲಾಗಿದೆಯೇ ?

ಇ) ಇಲ್ಲದಿದ್ದರೆ ಅಲ್ಲಿಯ ವಿದ್ಯಾರ್ಥಿಗಳ ಪರಿಸ್ಥಿತಿ ಸುಧಾರಣೆಗೆ ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು ?